(ಇಂದು ದಿನಾಂಕಃ **22/07/2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**<u>ಪಾಟೀ ಸವಾಲು ಮೇಲ್ಮನವಿದಾರರ ಪರ ಶ್ರೀ ಎಸ್.ಎಸ್.ಜಿ. ವಕೀಲರಿಂದಃ–</u>**

10. ದಿನಾಂಕಃ29/09/2021 ಕ್ಕೆ ಮುಂಚೆ ನಡೆದ ನಮ್ಮ ಸಂಸ್ಥೆಯ ವಿಷಯಗಳ ಕುರಿತು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎನ್ನುವುದು ನಿಜ. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳ ಕುರಿತು ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎನ್ನುವುದು ಸುಳ್ಳು ಏಕೆಂದರೆ ಆಗ ನಾನು ಸಂಸ್ಥೆಯ ಸದಸ್ಯನಾಗಿದ್ದೆ.

11. ದಿನಾಂಕಃ22/03/2012 ರಂದು ಸಂಸ್ಥೆ ಠರಾವು ಮಾಡಿ ಮೇಲ್ಮನವಿದಾರನನ್ನು ಕೆಲಸದಿಂದ ವಜಾ ಮಾಡಿಲ್ಲ ಎನ್ನುವುದು ಸುಳ್ಳು. ಯಾವುದೇ ಕಾನೂನುಕ್ರಮ ಕೈಗೊಂಡಿಲ್ಲ ಎನ್ನುವುದು ಸುಳ್ಳು.

12. ಮೇಲ್ಮನವಿದಾರನ 7 ದಿನಗಳ ಒಳಗೆ ಬಂದು ಕೆಲಸಕ್ಕೆ ಹಾಜರಾಗುವಂತೆ ದಿನಾಂಕಃ20/11/2010 ರ ಕನ್ನಡಪ್ರಭ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿಲ್ಲ ಎನ್ನುವುದು ಸುಳ್ಳು. ಆಪಾದನೆ ಪತ್ರ ತಯಾರಿಸಿಲ್ಲ ಮತ್ತು ಮೇಲ್ಮನವಿದಾರನಿಗೆ ಪೂರೈಸಿಲ್ಲ ಎನ್ನುವುದು ಸುಳ್ಳು.

13. ನಾನು ಕಾನೂನು ತಜ್ಞನಲ್ಲ. ಮೇಲ್ಮನವಿ ಕಾಲ ಪರಿಮಿತಿ ಅವಧಿ ಮೀರಿಲ್ಲ ಎನ್ನುವುದು ಸುಳ್ಳು. ಮೇಲ್ಮನವಿದಾರ ಪ್ರೌಢಶಾಲೆಯ ಪ್ರಭಾರ ಮುಖ್ಯೋಪಾಧ್ಯಾಯ ಎಂದು ಕೆಲಸ ಮಾಡುವಾಗ ಬ್ಯಾಟಿ ಮತ್ತು ಚಂದ್ರಗೇರಿ ಎನ್ನುವವರ ಹಾಜರಾತಿಯಲ್ಲಿ ತಿದ್ದುಪಡಿ ಮಾಡಿಲ್ಲ ಮತ್ತು ದಾಖಲೆ ಸೃಷ್ಟಿ ಮಾಡಿಲ್ಲ ಎನ್ನುವುದು ಸುಳ್ಳು. ಆ ಬಗ್ಗೆ ದೂರು ಕೊಟ್ಟಿಲ್ಲ. ಮೇಲ್ಮನವಿದಾರ ರಜೆ ಮಂಜೂರಿ ಮಾಡಿಸಿಕೊಳ್ಳದೇ ದೀರ್ಘಾವಧಿಯವರೆಗೆ ಗೈರು ಹಾಜರು ಉಳಿದು, ಪತ್ರಿಕೆ ಪ್ರಕಟಣೆ ನಂತರವೂ ಕೆಲಸಕ್ಕೆ ಹಾಜರಾಗದೇ, ಕರ್ತವ್ಯ ನಿರ್ವಹಿಸಲು ವಿಫಲ ನಾಗಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ನಮ್ಮ ಸಂಸ್ಥೆಗೆ 9 ಜನ ಸದಸ್ಯರಿದ್ದೇವೆ.

14. ಮೇಲ್ಮನವಿದಾರ ಸಿಬ್ಬಂದಿ ನಡುವೆ ಗುಂಪುಗಾರಿಕೆ ಮಾಡಿ, ಕೆಲವರನ್ನು ಸಂಸ್ಥೆಯ ವಿರುದ್ಧ ಎತ್ತಿಕಟ್ಟಿ, ಸಂಸ್ಥೆಯ ಚಟುವಟಿಕೆಯಲ್ಲಿ ಹಸ್ತಕ್ಷೇಪ ಮಾಡಿ, ಮೇಲಾಧಿಕಾರಿಗಳ ಆದೇಶ ಪತ್ರವನ್ನು ಪಡೆದು ಸಂಸ್ಥೆಯ ಗಮನಕ್ಕೆ ತರದೇ, ಸಂಸ್ಥೆಯ ಬಗ್ಗೆ ಕೀಳರಿಮೆ ಹುಟ್ಟುಹಾಕುವಂತಹ ಕೆಲಸ ಮಾಡಿದ್ದಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಸದರಿ ಆಪಾದನೆಗಳ ಕುರಿತು ದಾಖಲೆ ಹಾಜರುಮಾಡಿಲ್ಲ ಎನ್ನುವುದು ಸುಳ್ಳು.

15. ಮೇಲ್ಮನವಿದಾರ ಸಂಸ್ಥೆಯ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರು ವಿಚಾರಿಸಿದಾಗ ಅವಮಾನ ಮಾಡಿ, ಅವರ ಗಮನಕ್ಕೆ ತರದೇ ಮೇಲಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಿ,

ಸೇವಾ ನಿಯಮ ಮತ್ತು ನೀತಿ ಸಂಹಿತೆ ಉಲ್ಲಂಘಿಸಿ ಬೇರೆ ವ್ಯವಹಾರಗಳಲ್ಲಿ ತೊಡಗಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

16. ನಾನು 6 ನೇ ತರಗತಿಯವರೆಗೆ ಓದಿದ್ದೇನೆ. ಮೇಲ್ಮನವಿದಾರ ಪದವೀಧರ ಇರುತ್ತಾರೆ. ಮೇಲ್ಮನವಿದಾರ ಶಿಕ್ಷಕ ಹುದ್ದೆಗೆ ಅರ್ಹನಲ್ಲ ಮತ್ತು ಕರ್ತವ್ಯ ಕುರಿತು ಕಾಳಜಿ ವಹಿಸಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

17. 5 ನೇ ಎದುರುದಾರ ಮುಜಿಮುಲ್ಲಾ ಎನ್ನುವವರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಮೇಲ್ಮನವಿದಾರರನ್ನು ಕೆಲಸದಿಂದ ತೆಗೆದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.